ಕೆಲಸವನ್ನು ತೆಗೆದುಕೊಳ್ಳುವುದಕ್ಕಾಗಲಿಲ್ಲ. ಈ ಸಂದರ್ಭದಲ್ಲಿ ಹಿಂದೆ ಆದಂತಹ ಘಟನೆಗಳನ್ನು ನಾನು ಸ್ಮರಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಸೆಟ್ಟಲ್‌ಮೆಂಟಿನವರು ನಾವು ೧೨೫ ಲಕ್ಷರೂ.ಗಿಂತ ಜಾಸ್ತಿ ಕೊಡುವುದಕ್ಕಾಗುವುದಿಲ್ಲ. ಇದನ್ನು ಸ್ಟೇಟ್ ಸೆಕ್ಟಾರ್‌ನಲ್ಲಿ ಮಾಡಿಕೊಳ್ಳಿ, ಎಂದು ಅಂತಿಮ ನಿರ್ಣಯವನ್ನು ಕೊಟ್ಟಮೇಲೆ ಇದನ್ನು ಪ್ಲಾನ್ ಕೃಷ್ಣಾ ಪ್ರಾಜೆಕ್ಟ್‌ನಿಂದ ಚಾರ್ಜ್ ಆಫ್ ಮಾಡಿ ೨೪೧.೦೦ ಲಕ್ಷ ರೂ.ನಿಂದ ಅಂಗನವಾಡಿ ಹತ್ತಿರ ಸೇತುವೆ ಕಟ್ಟಬೇಕೆಂದು ತೀರ್ಮಾನ ಮಾಡಿದ್ದೇವೆ. ಈಗಾಗಲೇ ಟೆಂಡರ್ ಕರೆಯುವುದಕ್ಕೆ ನೋಟಿಫಿಕೇಷನ್ ಅಪ್ರೂವ್ ಮಾಡಿದ್ದಾರೆಂದು ಕಾಣುತ್ತದೆ. ಈ ಕೆಲಸವನ್ನು ಆದಷ್ಟು ಬೇಗ ಪ್ರಾರಂಭ ಮಾಡುತ್ತೇವೆ. ಇದರ ಬಗ್ಗೆ ಯಾವುದೇ ಸಂಶಯ ಇಲ್ಲ.

ಶ್ರೀ ಬಾಬುರೆಡ್ಡಿ ಎಂ. ತುಂಗಲ್.—ಈ ಭಾಗದ ಜನರಿಗೆ ಈ ರಸ್ತೆ ಬಹಳ ಪ್ರಾಮುಖ್ಯವಾಗಿರುವುದರಿಂದ ಈ ಕೆಲಸವನ್ನು ಈಗಲೇ ತೀವ್ರಗತಿಯಲ್ಲಿ ತೆಗೆದುಕೊಂಡು ಈಗಲೇ ಏತಕ್ಕೆ ಪ್ರಾರಂಭ ಮಾಡಬಾರದು ?

ಶ್ರೀ ಹೆಚ್.ಡಿ. ದೇವೇಗೌಡ.—ನಾವು ಏನಾದರೂ ಮಾಡಿ ಈ ೩೦ ವರ್ಷದ ಸಮಸ್ಯೆಯನ್ನು ಬಗೆಹರಿಸಬೇಕೆಂದು ಇದಕ್ಕೆ ಮಂಜೂರಾತಿ ಕೊಟ್ಟಿದ್ದೇವೆ. ಇದರ ತೀವ್ರತೆಯನ್ನು ಅರ್ಥ ಮಾಡಿಕೊಂಡು ಸರ್ಕಾರ ಇದರ ಬಗ್ಗೆ ಮಂಜೂರಾತಿ ಕೊಟ್ಟಿದೆ.

ಘಟಪ್ರಭಾ ಬಲದಂಡೆ ಕಾಲುವೆ

೨೨೨ (೭೩೬) ಶ್ರೀ ಜಿ.ವಿ. ಪುಟ್ಟೂರು (ಜಾಗಲಕೋಟೆ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ :—

ಘಟಪ್ರಭಾ ಬಲದಂಡೆ ಕಾಲುವೆಯನ್ನು ಯಾವಾಗ ಪ್ರಾರಂಭಿಸಲಾಯಿತು ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

೧೯೭೨-೭೩ನೇ ಇಸವಿಯಲ್ಲಿ ಬರಗಾಲ ಕಾಮಗಾರಿಯಲ್ಲಿ ಪ್ರಾರಂಭಿಸಲಾಯಿತು. ಏಳನೆ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ಣಗೊಳಿಸಲು ಯೋಜಿಸಲಾಯಿತು. ಘಟಪ್ರಭಾ ಯೋಜನೆಗೆ ಈಗಾಗಲೇ ೫೨ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಇದನ್ನು ಪೂರ್ತಿಯಾಗಿ ಪೂರೈಸುವುದಕ್ಕೆ ಇನ್ನು ೧೫೫ ಕೋಟಿ ರೂಪಾಯಿ ಹಣ ಬೇಕು. ಸರ್ಕಾರದ ಕಷ್ಟವನ್ನು, ಸದನದ ಮುಖೇನ ಈ ದೇಶದ ಜನರಿಗೆ ಹೇಳುತ್ತೇನೆ. ವರ್ಲ್ಡ್ ಬ್ಯಾಂಕಿನಿಂದ ಈ ಹಣವನ್ನು ದೊರಕಿಸಿಕೊಳ್ಳುವಲ್ಲಿ ಸರ್ಕಾರ ತೀವ್ರವಾದಂತಹ ಪ್ರಯತ್ನವನ್ನು ಮಾಡುತ್ತಿದೆ.

ಶ್ರೀ ಜಿ. ವಿ. ಪುಟ್ಟೂರ್.—ಮಾನ್ಯ ಮಂತ್ರಿಗಳು ಇದನ್ನು ಘಟಪ್ರಭಾ ಯೋಜನೆಯಲ್ಲಿ ಸೇರಿಸಿದ್ದೇವೆಂದು ತಿಳಿಸಿದ್ದಾರೆ. ಮಾನ್ಯ ಮಂತ್ರಿಗಳಲ್ಲಿ ನಾವು ಕೇಳಿಕೊಳ್ಳುವುದೇನೆಂದರೆ, ನಮ್ಮ ಭಾಗ ಕಳೆದ ೧೦ ವರ್ಷಗಳಿಂದ ಬರಗಾಲ ಪೀಡಿತ ಪ್ರದೇಶವಾಗಿದೆ. ಆದ್ದರಿಂದ ಇದನ್ನು ಬರಗಾಲದ ಸ್ಕೀಮಿನಲ್ಲಿ ಈ ಒಂದು ಕೆಲಸವನ್ನು ಮುಗಿಸಿಕೊಟ್ಟರೆ, ಅದರಿಂದ ರೈತ ಭಾಂದವರಿಗೆ ಸಹಾಯವಾಗಿದಂತಾಗುತ್ತದೆ. ಹಾಗೆ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮೊಯ್ಲಿಯವರು, ಬರಗಾಲ ಸ್ಕೀಮಿನಲ್ಲಿ ಸ್ವಲ್ಪ ಹಣವನ್ನು ಕೊಡುವುದಾದರೆ, ಈ ಕೆಲಸ ಬೇಗ ಮುಗಿಯುತ್ತದೆ. ಅವರು ಇದಕ್ಕೆ ಹಣವನ್ನು ಕೊಡಿಸಬೇಕೆಂದು, ನಾನು ಅವರಲ್ಲಿ ವಿನಂತಿ ಮಾಡುತ್ತೇನೆ.

ಸಂತೇಬಾಚಹಳ್ಳಿ ಬೆಟ್ಟದಹಳ್ಳಿ ಬಾರ್ಡರ್ ರಸ್ತೆಯ ಸುಧಾರಣೆ ಕುರಿತು

೨೨೩ (೪೩೩) ಶ್ರೀ ಕೃಷ್ಣ (ಕೃಷ್ಣರಾಜಪೇಟೆ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಸಂತೇಬಾಚಳ್ಳಿ-ಬೆಟ್ಟದಹಳ್ಳಿ ಗಡಿ ರಸ್ತೆ ಯಾರ ಅಧೀನದಲ್ಲಿದೆ ?

ಅ) ಹಾಸನ ಮಂಡ್ಯ ಗಡಿ ರಸ್ತೆಯಾದ ಇದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವುದು ಸರ್ಕಾರದ ವರ ಗಮನಕ್ಕೆ ಬಂದಿದೆಯೇ ?

ಇ) ಗಡಿ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮದ ಪ್ರಕಾರ ಈ ರಸ್ತೆಯನ್ನು ಡಾಂಬರ್ ರಸ್ತೆಯನ್ನಾಗಿ ಪಾರ್ಪಡಿಸಲು ಸಾಧ್ಯವಾಗುವುದೇ ?

ಈ) ರಸ್ತೆಯನ್ನು ಯಾವಾಗ ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿದೆ.

ಆ) ನಿರ್ಲಕ್ಷಿಸಿಲ್ಲ.

ಇ) ಆರ್ಥಿಕ ಲಭ್ಯತೆಗನುಗುಣವಾಗಿ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗುವುದು.

ಈ) ಇದು ಗ್ರಾಮಾಂತರ ರಸ್ತೆಯೆಂದು ಪರಿಗಣಿಸಿದ್ದು ರಸ್ತೆಯ ಕೆಲವು ಭಾಗಗಳು ಅಲ್ಲಲ್ಲಿ ಕೆಟ್ಟು ಹೋಗಿದ್ದು, ವಾಹನ ಸಂಚಾರಕ್ಕೆ ಅಷ್ಟಾಗಿ ಉತ್ತಮವಾಗಿಲ್ಲ. ರಸ್ತೆ ದುರಸ್ತಿ ಮತ್ತು ನಿರ್ವಹಣೆಗೆ ಒದಗುವ ಹಣದಲ್ಲಿ ಎಷ್ಟು ಕೆಲಸ ಸಾಧ್ಯವೋ ಅಷ್ಟನ್ನು ಮಾಡಲಾಗುತ್ತದೆ. ಹೆಚ್ಚಿನ ಅಭಿವೃದ್ಧಿ ಕೆಲಸಗಳನ್ನು ಹಣಕಾಸಿನ ಲಭ್ಯತೆಗನುಗುಣವಾಗಿ ಬರುವ ವರ್ಷಗಳಲ್ಲಿ ತೆಗೆದುಕೊಳ್ಳಲಾಗುವುದು.

ಶ್ರೀ ಕೃಷ್ಣ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಉತ್ತರದಲ್ಲಿ ಇದನ್ನು ಗ್ರಾಮಾಂತರ ರಸ್ತೆಯೆಂದು ಪರಿಗಣಿಸಿದ್ದೇವೆಂದು ಹೇಳಿದ್ದಾರೆ. ಅದನ್ನು ಅಂತರ್‌ಜಿಲ್ಲಾ ರಸ್ತೆಯಾಗಿ ಮೇಲ್ದರ್ಜೆಗೆ ಏರಿಸಿ. ಈ ರಸ್ತೆಯನ್ನು ಅಭಿವೃದ್ಧಿಪಡಿಸಬೇಕು. ಇಲ್ಲಿ ಅನೇಕ ಬಸ್‌ಗಳು ಓಡಾಡುತ್ತವೆ. ರಸ್ತೆಗಳು ಚೆನ್ನಾಗಿಲ್ಲದಿರುವುದರಿಂದ ಬಸ್‌ಗಳು ನಿಂತು ಹೋಗುತ್ತದೆ. ಈ ರಸ್ತೆಯನ್ನು ಅಭಿವೃದ್ಧಿ ಪಡಿಸುವುದಕ್ಕೆ ತೀವ್ರ ಗತಿಯಲ್ಲಿ ಪ್ರಯತ್ನವನ್ನು ಮಾಡುತ್ತೀರಾ ?

ಶ್ರೀ ಹೆಚ್.ಡಿ.ದೇವೇಗೌಡ.—ನಾನು ಈಗಾಗಲೇ ಒಪ್ಪಿಕೊಂಡಿದ್ದೇನೆ. ಈ ರಸ್ತೆ ಚೆನ್ನಾಗಿದೆಯೆಂದು ನಾನು ಹೇಳಲಿಲ್ಲ. ಆದರೆ ಹಣದ ಕಷ್ಟವಿದೆಯೆಂದು ನಾನು ತೋಡಿಕೊಂಡಿದ್ದೇನೆ.

ತೆಲಗು ಗಂಗಾ ಯೋಜನೆಗೆ ಕೃಷ್ಣಾ ನೀರಿನ ಬಳಕೆ

೨೨೪ (೧೬೩) ಶ್ರೀ ಶಿವಸಂಗಪ್ಪ ಸಿದ್ದಪ್ಪ ಕಡಪಟ್ಟಿ (ಹುನಗುಂದ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ತೆಲುಗು ಗಂಗಾ ಯೋಜನೆಗೆ ಕೃಷ್ಣಾ ನದಿಯ ನೀರನ್ನು ಬಳಸಿಕೊಳ್ಳಲು ಕರ್ನಾಟಕದ ಮುಖ್ಯಮಂತ್ರಿಯವರು ಆಕ್ಷೇಪಣೆ ಇಲ್ಲವೆಂದು ೧೯೮೫ನೇ ಇಸವಿ ಜೂನ್, ೨೪ರಂದು ಆಂಧ್ರಪ್ರದೇಶದ ಮುಖ್ಯಮಂತ್ರಿಯವರು ಪತ್ರಿಕೆಯಲ್ಲಿ ಹೇಳಿಕೆ ನೀಡಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಸದರಿ ಹೇಳಿಕೆಯಿಂದ ನಮ್ಮ ರಾಜ್ಯಕ್ಕೆ ಪ್ರತಿಕೂಲವಾಗುವುದಿಲ್ಲವೇ ? ಹಾಗೂ ಆ ಬಗ್ಗೆ ಸರ್ಕಾರದವರ ನಿಲುವೇನು ?

ಶ್ರೀ ಹೆಚ್.ಡಿ. ದೇವೇಗೌಡ(ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ಬಂದಿದೆ.

ಆ) ಅಹುದು. ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದ ಆಕ್ಷೇಪಣೆಗಳನ್ನು ಕಳುಹಿಸಲಾಗಿದೆ.

೧೧–೧೦ ಎ.ಎಂ.

ಇತ್ತೀಚೆಗೆ ಪತ್ರಿಕೆಗಳಲ್ಲಿ ವರದಿಯಾಗಿರತಕ್ಕಂಥದ್ದು ಸದನದ ಎಲ್ಲ ಸಹೋದ್ಯೋಗಿಗಳಿಗೂ ಸದಸ್ಯರುಗಳಿಗೆ ಗೊತ್ತಿರಬಹುದು. ಈಗಾಗಲೇ ಕೇಂದ್ರಸರ್ಕಾರ ಮೂರು ರಾಜ್ಯಗಳ ಅಧಿಕಾರಿ